

# ಮಾಹಿತ ---ತಾಯಿತಂದೆ ಹಾಗು ಶಿಕ್ಷಕರಿಗಾಗಿ ಒಂದು ಸುದ್ದಿ ಪತ್ರ

VOLUME I ISSUE I

SEP- OCT, 2010

## ಸಂಪಾದಕರಿಂದ …………

INSIDE THIS ISSUE


| | |
|---|---|
| ಬಾಲ್ಯದಲ್ಲಿ ಆಟದ ಮಹತ್ವ . | 2 |
| ಆಟಿಕೆಗಳು | 3 |
| ಸಂಪಾದಕರಿಗೆ ಪತ್ರಗಳು | 4 |


ಪ್ರಿಯ ಓದುಗರೆ,

ಈ ಮಾಹಿತಿ ಪತ್ರದಿಂದ ತಮ್ಮೊಡನೆ ಸಂಪರ್ಕ ಬೆಳೆಸುವುದು ನನಗೆ ಬಹಳ ಸಂತೋಷಕರವಾದ ವಿಚಾರ. ಇದು ನನ್ನ ಸುಯೋಗ ಸಹ. ಬಾಲ್ಯ ವಿಕಾಸದ ಪ್ರಮುಖ ವಿವಾದಾಸ್ಪದವಾದ ವಿಷಯಗಳ ಬಗ್ಗೆ ತಮ್ಮೊಂದಿಗೆ ವಿಚಾರವಿನಿಮಯ ನಡೆಸುವುದೇ ಮಾಹಿತಿಯ ಮೂಲ ಉದ್ದೇಶ. ಇವು ಕಲಿಸುವ, ಬೆಳೆಸುವ, ಹಾಗೂ ಈ ಬಗ್ಗೆ ಸರಕಾರದ ನೀತಿ, ನಿಯಮ ಅಥವಾ ಮಾರ್ಗದರ್ಶಕಪಂಕ್ತಿ ಮೊದಲಾದುವುಕ್ಕೆ ಸಂಬಂಧಪಟ್ಟ ವಿಷಯಗಳಾಗಿರಬಹುದು. ಮಾಹಿತಿ ನಾವುಗಳು ಪರಸ್ಪರ ಸಂಪರ್ಕಿಸುವ ಸಾಧನವಾಗಿವುದರಿಂದ, ದಯವಿಟ್ಟು ತಮ್ಮ ಅನಿಸಿಕೆಗಳನ್ನು ನಮಗೆ ತಿಳಿಸಿದರೆ, ನಾವು ಮುಂದುವರಿಯಲು ಸಹಾಯವಾಗುತ್ತದೆ. ಅಲ್ಲದೆ, ನಾವೆಲ್ಲರೂ ಸೇರಿ ಈ ವಿಷಯದಲ್ಲಿ ಬೇಕಾಗಿರುವ ಮಾರ್ಪಾಡುಗಳನ್ನು ತರಬಹುದು.

ಇದರಲ್ಲಿ ಮಂಡೀಕರಿಸುವ ವಿಷಯಗಳು ಮಕ್ಕಳ ಮೇಲೆ ಪರಿಣಾಮವನ್ನು ಉಂಟುಮಾಡುವವರೆಲ್ಲರಿಗೂ ಸಂಬಂಧಿಸಿದ್ದಾದರೂ, ಕೆಲವೊಂದು ವಿಚಾರಗಳು ತಾಯಿತಂದೆಯರಿಗೂ ಹಾಗೂ ಶಿಶುವಿಹಾರಗಳ ಮಕ್ಕಳ ಶಿಕ್ಷಕರಿಗೂ ಹೆಚ್ಚಾಗಿ ಸಂಬಂಧಿಸುವಂತಹವು. ಇವನ್ನು ಪ್ರಾಯಶಃ ಮುಖಪುಟದ ಮೇಲೆಯೇ ಪ್ರತಿಬಿಂಬಿಸಲಾಗುತ್ತದೆ. ಈ ಸಂಚಿಕೆಯಲ್ಲಿ ನಾವು ಒಂದು ಬಹಳ ಮೂಲಭೂತವಾದಂತಹ ವಿಚಾರವನ್ನು ನಿಮ್ಮ ಮುಂದಿಡುತ್ತಿದ್ದೇವೆ. ಅದೇ -ಬಾಲ್ಯಾವಸ್ಥೆಯ ಮೊದಲ ಹಂತಗಳಲ್ಲಿ ಆಟದ ಸ್ಥಾನ. ಈ ಬಗ್ಗೆ ಎಷ್ಟು ಹೇಳಿದರೂ ಬರೆದರೂ ಕಡಿಮೆಯೇ ಸರಿ. ಮಕ್ಕಳ ಖಚಿತವಾದ ಬೆಳವಣಿಗೆಗೆ ಪ್ರಯಾಸವಿಲ್ಲದ ಮತ್ತು ಸಂತೋಷಕರವಾದ ಏಕೈಕ ಸಾಧನ–ಆಟ.

ಈ ಸಂಚಿಕೆ ನಿಮಗೆ ಸಂತೋಷದಾಯಕವಾಗಿಯೂ ಹಾಗು ಪ್ರಯೋಜನಕಾರಿಯೂ ಆಗಿರುವುದೆಂದು ನಾವು ಆಶಿಸುತ್ತೇವೆ. ದಯವಿಟ್ಟು ನಮ್ಮನ್ನು mahiti@samyuktacdc.com ನಲ್ಲಿ ಸಂಪರ್ಕಿಸುವುದನ್ನು ಮರೆಯದಿರಿ.

ನಿಮ್ಮೊಡನೆ ದೀರ್ಘವಾದ ವ್ಯವಹಾರವನ್ನು ಆಶಿಸುತ್ತ

ಗಾಯತ್ರಿ ಕಿರಣ್

ಸಂಪಾದಕಿ–Dr. ಗಾಯತ್ರಿ ಕಿರಣ್.

ಕನ್ನಡ ಅನುವಾದನೆ-- ಶ್ರೀಮತಿ ಗೀತಾ ನಟೇಶ್

ತಾಂತ್ರಿಕ ಮಾರ್ಗದರ್ಶನ–ಶ್ರೀ ಕೆ.ಆರ್.ಹರ್ಷವರ್ಧನ

*FOR PRIVATE CIRCULATION ONLY.*

# ಬಾಲ್ಯದಲ್ಲಿ ಆಟದ ಮಹತ್ವ



ಮಗು ಅಂದ ತಕ್ಷಣ ಅಥವಾ ಯಾವುದೇ ಪರಿಸರದಲ್ಲಿ ಒಂದು ಮಗುವನ್ನು ಕಲ್ಪಿಸಿಕೊಂಡಾಗ ನಮ್ಮ ಮನಸ್ಸಿನಲ್ಲಿ ಮೊದಲು ಮೂಡುವ ಚಿತ್ರ ಯಾವುದು?—ಬಹುಶಃ ಆಟವಾಡುತ್ತಿರುವ ಮಗು ಇಲ್ಲವೇ ಮಕ್ಕಳು. ಅಂದಮೇಲೆ ಆಟ ಅಂದರೆ ಏನು?, ಯಾವ ಕಾರಣಕ್ಕಾಗಿ ಅದಕ್ಕೆ ಇಷ್ಟೊಂದು ಪ್ರಾಮುಖ್ಯತೆ?, ಮಕ್ಕಳಿಗೆ ಯಾವ ತರಹದ ಆಟ ಇಷ್ಟವಾಗುತ್ತದೆ?ಹಾಗೂ ಈ ಚಟುವಟಿಕೆಯಿಂದ ಮಕ್ಕಳಿಗೆ ಯಾವ ತರಹದ ಲಾಭ ಸಿಗುತ್ತದೆ?—ಈ ಬಗ್ಗೆ ಸ್ವಲ್ಪ ಯೋಚಿಸೋಣ.

ಇಲ್ಲಿ ನಮ್ಮ ಮೂಲ ಆಧಾರವೇನೆಂದರೆ, ಪ್ರತಿಯೊಂದು ಮಗು ಸಹ, ಬೆಳವಣಿಗೆ, ಅಭಿವೃದ್ಧಿ ಹಾಗೂ ಕಲಿಯುವಿಕೆಯನ್ನು ಬೆನ್ನಟ್ಟಿ ಹೋಗುವ ಸ್ವಭಾವವನ್ನು ಹುಟ್ಟಿನಿಂದಲೇ ಪಡೆದಿರುತ್ತದೆ. ಮಕ್ಕಳ ಏಳಿಗೆಗೆ ಸಂಬಂಧಿಸಿದವರಾರೂ ಈ ಆಧಾರ ತತ್ವದ ಬಗ್ಗೆ ಯಾವುದೇ ರೀತಿಯ ಆಶಂಕೆಯನ್ನು ವ್ಯಕ್ತಪಡಿಸುವುದಿಲ್ಲವೆಂದು ಭಾವಿಸುತ್ತೇನೆ. ಅಂದಮೇಲೆ, ಅಭಿವೃದ್ಧಿಯ ಈ ಧ್ಯೇಯಗಳನ್ನು ಮಕ್ಕಳು ಸಾಧಿಸುವ ಸ್ವಾಭಾವಿಕ ಮಾರ್ಗ ಯಾವುದು?—ಆಟವೇ ಅಲ್ಲವೇ?..

ಅಂದಮೇಲೆ, ಅಭಿವೃದ್ಧಿಯ ಈ ಧ್ಯೇಯಗಳನ್ನು ಮಕ್ಕಳು ಸಾಧಿಸುವ ಸ್ವಾಭಾವಿಕ ಮಾರ್ಗ ಯಾವುದು?—ಆಟವೇ ಅಲ್ಲವೇ?.

## ಆಟದಿಂದಾಗುವ ಪ್ರಯೋಜನಗಳೇನು?

ಆಟದಿಂದ ಅನೇಕ ಪ್ರಯೋಜನಗಳಿರುವುದೆಂದು ಚೆನ್ನಾಗಿ ತಿಳಿದಿರುವ ಸಂಗತಿ. ಇದು ಹಲವಾರು ಸಂಶೋಧನೆಗಳ ಫಲಿತಾಂಶವೂ ಆಗಿದೆ. ಹಲವರ ಅಭಿಪ್ರಾಯದಲ್ಲಿ ಮೊದಲ ವರ್ಷಗಳಲ್ಲಿ ಮಕ್ಕಳಿಗೆ ಆಟದಿಂದ ಬಹಳ ಹೆಚ್ಚಿನ ಲಾಭವಿರುವುದರಿಂದ, ಆಟವನ್ನು ಯಾವ ಕಾರಣಕ್ಕೂ ಅಲಕ್ಷ್ಯಿಸಬಾರದು. ಆಟ ಮಕ್ಕಳಲ್ಲಿರುವ ಮಾನವ ಸಂಪತ್ತನ್ನು ಕ್ರಿಯಾಶಕ್ತಿಯುತವಾಗಿಸಿ, ಅವರ ಭಾವುಕ, ಸಾಮಾಜಿಕ ಹಾಗು ಬುದ್ಧಿಶಕ್ತಿಯ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಇದು ಶಾಲೆಯಲ್ಲಿ ಮಕ್ಕಳ ಯಶಸ್ಸಿನ ಮೇಲೂ ಸಹ ಪ್ರಭಾವ ಬೀರುತ್ತದೆ. ಯಾವ ಮಕ್ಕಳು ಶಿಶುವಿಹಾರ (pre-school) ದಲ್ಲಿ ಆಟದ ಮಾಧ್ಯಮದಿಂದ ಶಿಕ್ಷಣ ಪಡೆದಿಲ್ಲವೋ, ಅಂಥಹವರು ಮುಂದಿನ ಶಾಲಾ ತರಗತಿಗಳಲ್ಲಿ ಕಲಿಯುವುದರಲ್ಲಿ ಆಸಕ್ತಿ ತೋರುವಲ್ಲಿ ಹಾಗೂ ಯಶಸ್ವಿಯಾಗುವುದರಲ್ಲಿ ಕೊರತೆಯನ್ನು ತೋರಿಸುತ್ತಾರೆ. ಯಾವ ಮಕ್ಕಳು ಮನ ತಣಿಯುವಷ್ಟು ಆಟವಾಡುತ್ತಾರೋ, ಅವರು ಪ್ರಾಥಮಿಕ ಶಾಲೆಯಲ್ಲಿ ಹೆಚ್ಚಿಗೆ ಚೆನ್ನಾಗಿ ಕಲಿಯುತ್ತಾರೆ.

**ಆಟವನ್ನು ವರ್ಣಿಸುವುದು ಎಷ್ಟು ಸುಲಭವೋ, ಅಷ್ಟೇ ಕಷ್ಟ ಸಹ. ಆಟವನ್ನು ಬಹಳಷ್ಟು ರೀತಿಗಳಲ್ಲಿ ವರ್ಣಿಸಲಾಗಿದೆ. ಹಲವರು ಆಟವನ್ನು □ಮಗುವಿನ ಕೆಲಸ□ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ , ಕೆಲವರು ಆಟ □ಮಗುವಿನ ಪ್ರವೃತ್ತಿ□ ಎನ್ನುತ್ತಾರೆ.**

ಆಟವಾಡುವಾಗ ಮಕ್ಕಳು ಹೊಸ ವಿಷಯಗಳನ್ನು ಗ್ರಹಿಸುತ್ತಾರೆ. ಅಲ್ಲದೆ, ಆಟ ಸಹಜವಾಗಿ ಪ್ರೇರೇಪಿಸಲ್ಪತ್ತಂತಹ ಕಾರ್ಯಗಳಲ್ಲಿ ಪ್ರಾಯಶಃ ಎಲ್ಲಕ್ಕಿಂತ ಬಹಳ ಪ್ರಬಲವಾದುದು. ಇದು ಸಹಜ ಪ್ರವೃತ್ತಿಗಳಾದ ಕುತೂಹಲ, ಚುರುಕುತನ, ಕಲ್ಪನಾಶಕ್ತಿ ಹಾಗೂ ವಿವಿಧ ದಿಶೆಗಳಲ್ಲಿ ಆಲೋಚನೆ ಮಾಡುವುದು- ಇವೆಲ್ಲಕ್ಕೂ ಆಧಾರ. ಇವೇ ಎಲ್ಲಾ ಪ್ರವೃತ್ತಿಗಳನ್ನು ನಾವು ಮಕ್ಕಳಲ್ಲಿ ಅಸ್ವಾಭಾವಿಕ ರೀತಿಯಿಂದ ಮತ್ತು ಉಪಾಯಗಳಿಂದ ಬೋಧಿಸಲು ಪ್ರಯತ್ನಿಸುತ್ತೇವೆ. ಹಾಗೆ ನೋಡಿದರೆ, ಮಕ್ಕಳಿಗೆ ಬೇಕಾದದ್ದು ಸಮಯ ಹಾಗೂ ಸ್ವತಂತ್ರವಾಗಿ ಆಟವಾಡುವ ಅವಕಾಶ ಅಷ್ಟೇ.

ಆಟ ಮಕ್ಕಳಲ್ಲಿ ಸಾಮರ್ಥ್ಯತೆ, ಕುಶಲತೆ, ಗೆಲುವು ಮತ್ತು ಆತ್ಮವಿಶ್ವಾಸವನ್ನು ಸಹಜವಾಗಿ ಬೆಳೆಸುತ್ತದೆ ಮತ್ತು ಈ ಪ್ರವೃತ್ತಿಗಳು ಬಹಳ ಕಾಲ ಉಳಿಯುವಂತೆಯೂ ಮಾಡುತ್ತದೆ.

ಆಟ, ಅದರಲ್ಲೂ, ಬೇರೆಯವರಂತೆ ನಟಿಸುವ ಆಟ ಮಕ್ಕಳಲ್ಲಿ ವ್ಯಕ್ತಿ ಸ್ವಾತಂತ್ರ ಪಡೆಯುವಂತೆ ಮಾಡುತ್ತದೆ ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಸಹಾಯಕಾರಿಯಾಗುತ್ತದೆ. ಆಟ ಸಹಬಾಳ್ವೆಯನ್ನು ಹಾಗೂ ಇತರರೊಂದಿಗೆ ಸಮನಾಗಿ ಹಂಚಿಕೊಳ್ಳುವುದನ್ನು ಕಲಿಸುತ್ತದೆ. ಪರಿಸರದ ವಿವಿಧತೆಯನ್ನು ಅಂಗೀಕರಿಸಲು ಮತ್ತು ಕೀಳರಿಮೆಯ ಭಾವನೆಗಳನ್ನು ಮೆಟ್ಟಲು ಸಹ ಸಹಾಯ ಮಾಡುತ್ತದೆ.

# ಮಕ್ಕಳು ಯಾವ ಆಟಿಕೆಗಳೊಂದಿಗೆ ಆಡಲು ಇಷ್ಟಪಡುತ್ತಾರೆ?

ಇಂದಿನ ಬಲುವೇಗದ ಜೀವನದಲ್ಲೂ, ಇಷ್ಟೆಲ್ಲಾ ಮುಂದುವರೆದ ತಂತ್ರಜ್ಞಾನದ ಯುಗದಲ್ಲೂ ಸಹ ಪಾಲನೆ ಪೋಷಣೆ ಮಾಡುವಂತಹ ಹಾಗೂ ಜತನ ಮಾಡುವಂತಹ ಹಿರಿಯರಿಗೆ ಸರಿಸಮಾನವಾದ ಆಟಿಕೆ ಬೇರಾವುದೂ ಇಲ್ಲ. ಮಗುವಿನ ಪರಿಸರದಲ್ಲಿ ಮಾನವ ಪ್ರಭಾವವನ್ನು ಬೇರಾವ ಆಟಿಕೆಯೂ ಭರಿಸ ಲಾರದು. ಹಸುಳೆಗಳು ಸಾಮಾನ್ಯವಾಗಿ ತಮ್ಮ ಇಂದ್ರಿಯಗಳ ಚಲನೆಯನ್ನು ಒಳಗೊಳ್ಳುವಂತಹ ಆಟದಿಂದ ಹರ್ಷಗೊಳ್ಳುತ್ತವೆ. ಈಗಷ್ಟೆ ನಡೆಯಲು ಕಲಿಯುತ್ತಿರುವ ಮಕ್ಕಳು, ಅವರ ಇಂದ್ರಿಯಗಳನ್ನು ಪ್ರಚೋದಿಸುವಂತಹ ಹಾಗೂ ಅವರ ಚಲನೆಯ ಕುಶಲತೆಯನ್ನು ಹೆಚ್ಚಿಸುವಂತಹ ಚಟುವಟಿಕೆಗಳಲ್ಲಿ ತೊಡಗುತ್ತವೆ. ಸುಲಭವಾದ ರೀತಿಯಿಂದ  ಹಾಗೂ ಪುನಃ ಪುನಃ  ಆಡುವುದರಿಂದ ಮಕ್ಕಳು ಪರಿಣಾಮಕಾರಿಯಾಗಿ ವಸ್ತುಗಳನ್ನು ಹಾಗೂ ತಮ್ಮ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಹಸುಳೆಗಳು ತಾವೇ ಆಡಿಕೊಳ್ಳುತ್ತವೆ ಅಥವಾ ಆಟಿಕೆಗಳೊಂದಿಗೆ ಆಡುತ್ತವೆ; ಆದರೆ ಈಗ ತಾನೆ ಹೆಜ್ಜೆ ಹಾಕಲು ಕಲಿತಿರುವ ಮಕ್ಕಳು ಇತರ ಮಕ್ಕಳ ಜತೆಗಲ್ಲದಿದ್ದರೂ, ಅವರ ಸನಿಹದಲ್ಲಿ ಆಡುತ್ತಾರೆ. ಪಕ್ಕದಲ್ಲಿ ಆಡುವ ಮಕ್ಕಳು ಪರಸ್ಪರ ಸಂಭಾಶಿಸಬಹುದು, ಇಲ್ಲದೆಯೂ ಇರಬಹುದು.ಹಾಗೇ, ಒಬ್ಬರ ಮೇಲೊಬ್ಬರು  ಗಮನಕೊಡಬಹುದು ಅಥವಾ ಇಲ್ಲದೆಯೂ ಇರಬಹುದು. ಶಿಶುವಿಹಾರದ ಮಕ್ಕಳು ಆಟದ ಸಾಮಾನುಗಳಿಂದ ಬೇರೇನಾದರೂ ಕಟ್ಟಲು ಅಥವಾ ರಚಿಸಲು ಇಷ್ಟಪಡುತ್ತಾರೆ. ಬೇರೆ ಬೇರೆ ಪಾತ್ರಗಳನ್ನು ವಹಿಸುವುದು, ಅಲ್ಲದೆ ಯಾವುದೇ ಅಸಲು ಪದಾರ್ಥದ ಬದಲು ಬೇರೆ ಆಸರೆಗಳನ್ನು ಬಳಸುವುದು ಅವರಿಗೆ ಇಷ್ಟ. ಮಕ್ಕಳು ತಮ್ಮ ಆಸೆಗಳನ್ನು ಹಾಗೂ ಬಯಕೆಗಳನ್ನು ಪೂರೈಸುವಂತೆ ಘಟನೆಗಳ ವಿವರಗಳನ್ನು ಬದಲಾಯಿಸಿ ಪು ನರಾವರ್ತಿಸುತ್ತಾರೆ. ಇದನ್ನು ಸಾಮಾನ್ಯವಾಗಿ pretend play'—'ನಟಿಸುವ ಆಟ ಅನ್ನುತ್ತಾರೆ.

ಕೆಲವು ಸಾಮಾನ್ಯ ಆಟಿಕೆಗಳು- ಮರಳು, ಜೇಡಿ ಮಣ್ಣು, ನೀರು, ಮನೆಯ ಸಾಮಾನುಗಳು, ಪುಸ್ತಕಗಳು, ಬಣ್ಣಗಳು,

## ಹಸುಳೆಗಳ ಆಟಿಕೆಗಳು

- ಸುಲಭವಾಗಿ ಚಲಿಸುವ ವಸ್ತುಗಳು,
- ಇಂಪಾದ ದನಿ ಇರುವ ಆಟಿಗೆಗಳು,
- ಗಿಳಕಿಗಳು,
- ಕನ್ನಡಿ ಮೊದಲಾದುವು.

## ಹೆಜ್ಜೆ ಹಾಕುವ ಮಕ್ಕಳ ಆಟಿಕೆಗಳು

- ಅವರ ಶರೀರ,
- ಮನೆಯ ಸಣ್ಣಪುಟ್ಟ ಸಾಮಾನುಗಳು,
- ಬೊಂಬೆ, ಆಟದ ವಾಹನಗಳು , ಚೆಂಡು,
- ಕೈ ಕೆಲಸದ ಸಾಮಾನುಗಳು
- ಕಾಗದ, ಬಣ್ಣ ಇತ್ಯಾದಿ.
- ಅಡಿಗೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು, ವಾಹನ ಚಾಲಕರಂತೆ ನಟಿಸುವುದು.

## ಶಿಶುವಿಹಾರದ ಮಕ್ಕಳ ಆಟಿಗೆಗಳು

- ಮರಳು ಗುಡ್ಡೆ,
- ಮೈ ಮೇಲಿನ ಪೋಷಾಕು ,
- ಕೈ ಕೆಲಸದ ಸಾಮಗ್ರಿಗಳು,
- ಸುಲಭವಾಗಿ ಜೋಡಿಸಲಾಗುವ ಆಟದ ಸಾಮಾನುಗಳು,
- ಹಲಗೆಯ ಆಟಗಳು,



SaMYUKta

CHILD DEVELOPMENT CONSULTANCY

**Samyukta Child Development Consultancy**

GF1, Jeevanadi Summit,
4B Sri Rama Temple Street,
New Thippasandra,
Bangalore-560075

www.samyuktacdc.com
Ph- +91-98445-25045
mahiti@samyuktacdc.com

ಸಂಯುಕ್ತ ಮೂಲವಾಗಿ ಸಂಸ್ಕೃತದ ಪದ. ಅದರ ಅರ್ಥ—ಒಂದುಗೂಡಿದ, ಜತೆಗೂಡಿದ

ಸಂಯುಕ್ತ, ಮಕ್ಕಳ ಅಭಿವೃದ್ಧಿಯ ಕ್ಷೇತ್ರದಲ್ಲಿ ಈಗಿರುವ ವಿನ್ಯಾಸದಲ್ಲಿಯೆ ಸಲಹೆಗಾರರ ರೂಪದಲ್ಲಿ ಕೆಲಸ ಮಾಡಿ, ಇರುವ ಸೌಲಭ್ಯಗಳನ್ನು ಪೂರಕವಾಗುವಂತೆ ಒದಗಿಸಿ,ನಿಯಮಿತ ಕಾರ್ಯದಲ್ಲಿ ಸಹಾಯ ಮಾಡುವ ಧ್ಯೇಯವನ್ನು ಹೊಂದಿದೆ. ಶಾಲೆಗಳು, ಸರಕಾರದ ಏಜೆನ್ಸಿಗಳು, ಖಾಸಗಿ ಸಂಸ್ಥೆಗಳು, ಟೀಚರ್ ಟ್ರೈನಿಂಗ್ ಕಾಲೇಜುಗಳು ,ಏನ್.ಜಿ.ಓ ಗಳು ಮೊದಲಾದುವು ಸಂಯುಕ್ತದ ಸಹಭಾಗಿಗಳಾಗಬಹುದು.

ಸಂಯುಕ್ತದ ಇತರ ಚಟುವಟಿಕೆಗಳ ಒಂದು ಅಂಗವಾಗಿ ಮಾಹಿತಿ-ಸುದ್ದಿ ಪತ್ರವನ್ನು ಪ್ರಾರಂಭಿಸಲಾಗಿದೆ. ಈ ಸುದ್ದಿಪತ್ರ 12ವರ್ಷಗಳೊಳಗಿನ ಮಕ್ಕಳ ತಾಯಿ ತಂದೆಯರು ಹಾಗೂ ಶಿಕ್ಷಕರಿಗಾಗಿ ಮೀಸಲಾಗಿದೆ.

## ಸಂಪಾದಕರಿಗೆ ಪತ್ರಗಳು



ನಮ್ಮ ಓದುಗರ ಪ್ರತಿಕ್ರಿಯೆಗಳಿಂದ ನಾವು ಬೆಳೆದು ಯಶಸ್ವಿಯಾಗಲು ಯೋಜಿಸಿದ್ದೇವೆ. ಈ ಮೇಲೆ ಕೊಟ್ಟಿರುವ ವಿಳಾಸಕ್ಕೆ ಪತ್ರ ಅಥವಾ ಈ-ಮೇಲ್ ಮೂಲಕ ನಿಸ್ಸಂಕೋಚವಾಗಿ ಬರೆಯಿರಿ. ತಮ್ಮ ಪ್ರತಿಕ್ರಿಯೆಗಳನ್ನು ಆದಷ್ಟು ಮಟ್ಟಿಗೆ ಪ್ರಕಟಿಸಲು ಪ್ರಯತ್ನಿಸುತ್ತೇವೆ. ನಿಮ್ಮ ಪ್ರತಿಕ್ರಿಯೆಗಳನ್ನು mahiti@samyuktacdc.com ನಲ್ಲಿ ನಿರೀಕ್ಷಿಸಲಾಗುತ್ತಿದೆ.